ಸಂಪಾದಕೀಯ

# ಜಗವ ಮರೆಯುವ ಕ್ಷಣಗಳು

**ಕೆ**ಲವೊಂದು ಕ್ಷಣಗಳಿವೆ. ಆಗ ನಮಗೆ ಏನೂ ಬೇಡವಾಗುತ್ತದೆ. ಇಡೀ ಪ್ರಪಂಚವೇ ಸ್ತಬ್ಧವಾದಂತೆ, ನಮ್ಮ ಎದೆ ಬಡಿತವೇ ನಿಂತಂತೆ, ಸಮಸ್ತ ಕ್ರಿಯೆಗಳೂ ಗಾಢ ಮೌನದಲ್ಲಿ ಲಯವಾದಂತೆ ಭಾಸವಾಗುತ್ತದೆ. ಅದು ಭಾವತೀವ್ರತೆಯ, ಹೃದಯೋತ್ಕರ್ಷಕವಾದ, ಲೋಕೋತ್ತರ ರಸಸ್ಪರ್ಶದ ದಿವ್ಯ ಕ್ಷಣಗಳು.

ಹಿಮಾಲಯದ ಶಿಖರವೊಂದರ ತುತ್ತತುದಿ — ಎದುರಿಗೆ ಪರ್ವತಶಿಖರಗಳ ಸಾಲುಸಾಲು, ನಡುವೆ ಪಾತಾಳದಂತಹ ಕಣಿವೆಯ ಆಳ, ದುರ್ಗಮ ಅರಣ್ಯದಲ್ಲಿ ನಿರ್ಜನ ಪ್ರದೇಶ... ಸುತ್ತ ಆವರಿಸಿದ ಕತ್ತಲನ್ನು ಭೇದಿಸಿ ಸೂರ್ಯನ ಕಿರಣಗಳು ಹೊಂಬಣ್ಣವನ್ನು ತಾಳಿವೆ; ದೂರ ಹಿಮಶಿಖರಗಳ ತುತ್ತತುದಿ ಚಿನ್ನದ ಖಂಡಗಳನ್ನು ಪೇರಿಸಿಟ್ಟಂತೆ ಬೆಳಗುತ್ತಿವೆ! ಭೂಮಂಡಲದ ಭವ್ಯಶೋಭೆ ಸ್ವರ್ಗಲೋಕವನ್ನೂ ದಾಟಿ, ಅದರಾಚಿನ ಹಿರಣ್ಯಗರ್ಭದ ದರ್ಶನವನ್ನು ಮಾಡಿಸಿದಂತಿದೆ... ದೇವತಾತ್ಮನಾದ ಹಿಮಾಲಯದ ದಿವ್ಯ ಅರುಣೋದಯವು ಜಗತ್ತಿನ ಎಲ್ಲ ಸೌಂದರ್ಯವನ್ನೂ ಮೀರಿ ನಿಂತಿದೆ!

— ಈ ಬಗೆಯ ಭವ್ಯ, ದಿವ್ಯ ಅನುಭವ ಎಲ್ಲರಿಗೂ ಉಂಟಾಗುವುದು ವಿಭಿನ್ನ ಸಂದರ್ಭಗಳಲ್ಲಿ, ಬೇರೆ ಬೇರೆ ವಿಧದಲ್ಲಿ. ಪ್ರತಿಯೊಬ್ಬನೂ ತನ್ನ ತಿಳಿವಳಿಕೆಗೆ ಅನುಗುಣವಾಗಿ ಅದನ್ನು ಅನುಭವಿಸುವನು. ಒಬ್ಬೊಬ್ಬನು ಕೂಡ ಅದನ್ನು ಅನುಭವಿಸಿದಾಗ ನೀಡುವ ಪ್ರತಿಕ್ರಿಯೆಯೂ ಭಿನ್ನ. ಕೆಲವರು, ''ಆಹಾ! ಅದ್ಭುತ! ನನಗೆ ಎಲ್ಲವೂ ಮರೆತುಹೋಯಿತು'' ಎಂದು ಉದ್ಗರಿಸುತ್ತಾರೆ. ಇನ್ನು ಕೆಲವರು, ''ಇದನ್ನು ವರ್ಣಿಸಲು ಮಾತುಗಳೇ ಇಲ್ಲ'' ಎನ್ನುತ್ತಾರೆ. ಕೆಲವರು ನಿಂತಲ್ಲೇ ಕಲ್ಲಾಗಿಬಿಡುತ್ತಾರೆ. ಆದರೆ ಅವರ ಮುಖದಲ್ಲಿ, ಕಣ್ಣುಗಳಲ್ಲಿ ಆ ಅನುಭವ ಪ್ರತಿಬಿಂಬಿಸುತ್ತದೆ. ಕವಿ, ಲೇಖಕ ಅದನ್ನು ಬರಹದ ಮೂಲಕ ಹಿಡಿದಿಡಲು ಯತ್ನಿಸಬಹುದು; ಕಲಾವಿದ ವರ್ಣಚಿತ್ರದ ಮೂಲಕ ಅದರ ಪ್ರತಿಸೃಷ್ಟಿ ಮಾಡಲೆತ್ನಿಸಬಹುದು. ಆದರೆ ಏನೂ ಮಾಡದೆ, ತನಗಾದ ಅಸಾಧಾರಣ ಭಾವನೆಯನ್ನು ಮತ್ತೆ ಮತ್ತೆ ಮೆಲುಕು ಹಾಕುತ್ತ ಆನಂದಿಸುವವರು ಬಹುಮಂದಿ.

### ರಸಶಿಖರತದ ತಾದಾತ್ಮ್ಯ

ಇಂಥ ಅಸಾಧಾರಣ ಕ್ಷಣಗಳು ಉಂಟಾಗುವುದು ಯಾವಾಗ? ಹೆಚ್ಚಾಗಿ ಅಸಾಧಾರಣ ದೃಶ್ಯವನ್ನು ಕಂಡಾಗ, ಲೋಕವನ್ನು ಮೀರಿ ನಿಂತ ಅನುಭವವಾದಾಗ. ನಿಸರ್ಗದ ಅಸಾಧಾರಣ ಸೌಂದರ್ಯ ಮಾನವನ ಹೃದಯದಲ್ಲಿ ಬಗೆಬಗೆಯ ಭಾವನೆಗಳನ್ನು ಮೂಡಿಸುತ್ತವೆ. ಹಿಮಾಲಯ, ಸಮುದ್ರ, ವಿಸ್ತಾರವಾದ ಅರಣ್ಯಪ್ರದೇಶ, ಜಲಪಾತವೇ ಮುಂತಾದ ದೃಶ್ಯಗಳು.... ಮಾನವನ ಸಹಜ ಅಹಂಭಾವವನ್ನು ಮರೆಸಿ, 'ನೋಡಿದೆಯಾ? ನಿನ್ನ ಅರಿವನ್ನು ಮೀರಿ ಆಶ್ಚರ್ಯ- ಅದ್ಭುತಗಳನ್ನು ಕೆರಳಿಸುವ ಎಷ್ಟೊಂದು ರಹಸ್ಯಗಳು ನನ್ನ ಮಡಿಲಲ್ಲಿ ಅಡಗಿವೆ ಗೊತ್ತೆ? — ಎಲೈ ಮಾನವಾ! ನಾನೇ ಸರ್ವಸ್ವ ಎಂಬ ಅಹಂಕಾರ ಬೇಡ, ನೀನು ಹೆಚ್ಚೇನೂ ಅರಿತಿಲ್ಲ!' ಎಂದು ಪ್ರಕೃತಿ ಮಾತೆ ನಮ್ಮನ್ನು ಛೇಡಿಸಿದಂತೆ ನಮಗನಿಸುತ್ತದೆ. ಇದಲ್ಲದೆ, ಕಲ್ಪನೆ, ಭಾವನೆಗಳ ಮೂಲಕವೂ ಮಾನವನು ಅಸಾಧಾರಣ ಜಗತ್ತನ್ನು ಪ್ರವೇಶಿಸಿ, ಪ್ರಾಪಂಚಿಕ ಸೀಮೆಯನ್ನು ಮೀರಿ ಪ್ರಯಾಣ ಮಾಡಬಹುದು; ಒಂದು ಹೆಜ್ಜೆ ದಾಟಿ ಹೊಸ ಲೋಕವೊಂದರ ಪ್ರವೇಶ ಮಾಡಬಹುದು. ಆಗ ಅವನ ಹೃದಯ ಹಿಗ್ಗುವುದು, ವಿಸ್ತಾರವಾಗುವುದು.

ಕಾವ್ಯ, ನಾಟಕ, ನೃತ್ಯ, ಸಂಗೀತಗಳ ಮೂಲಕವೂ ಅವುಗಳನ್ನು ಆಸ್ವಾದಿಸಬಹುದು. ರಸಿಕನು ತನ್ನ ಸದ್ಯದ ಅವಸ್ಥೆಯನ್ನು ಮರೆತು, ರಸಾನುಭವದಲ್ಲಿ ಮೈಮರೆಯುವಾಗಲೂ ಇಂತಹ 'ಮೈಮರೆಯುವ' ಕ್ಷಣಗಳಿರುತ್ತವೆ. ತತ್ತ್ವಜ್ಞಾನಿ, ವಿಜ್ಞಾನಿ ಅಥವಾ ಯಾವುದೇ ಪರಿಣತ ಕೆಲಸಗಾರ ತನ್ನ ಕಾರ್ಯದ ಔನ್ನತ್ಯದ ಶಿಖರದಲ್ಲಿ ನಿಂತ ಕೆಲವು ಕ್ಷಣಗಳಲ್ಲೂ ಇದೇ ಬಗೆಯ ಅನುಭವಾಗುವುದು. ಇಂಗ್ಲಿಷ್‌ನಲ್ಲಿ sublime ಎಂದೂ, ಕನ್ನಡದಲ್ಲಿ 'ಭವ್ಯತೆ', 'ಮಹೋನ್ನತಿ' ಎಂದೂ ಕರೆಯುವ ಸಂದರ್ಭದಲ್ಲಿ , ಈ ಅನುಭವವನ್ನು ಕುರಿತಾಗಿಯೇ ಹೇಳಲಾಗಿದೆ. ಸಾಮಾನ್ಯರೆಲ್ಲರ ಅನುಭವಕ್ಕೆ ಲಭಿಸುವ ಈ ಭಾವದ ಮೂಲವೆಲ್ಲಿ? ಅದನ್ನು ನಾವು ಅರಸಬಹುದೆ? ಅಥವಾ ತಲುಪಬಹುದೆ? — ಈ ಬಗೆಯ ಚಿಂತನೆ ನಮ್ಮನ್ನು ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಕರೆದೊಯ್ಯುತ್ತದೆ.

### ಆಧ್ಯಾತ್ಮಿಕ ಅನುಭೂತಿ

ಎಲ್ಲ ಕಲೆಗಳ, ಜ್ಞಾನಶಾಖೆಗಳ, ಶಾಸ್ತ್ರಗಳ ಅಂತಿಮ ನೆಲೆ ಅಧ್ಯಾತ್ಮದಲ್ಲಿ ಅವಸಾನವಾಗುವುದು ನಮ್ಮ ಪರಂಪರೆಯಲ್ಲಿ

ಸರ್ವೇಸಾಮಾನ್ಯ. ವ್ಯಾಕರಣ, ಆಯುರ್ವೇದ, ಖಗೋಳ, ಜ್ಯೋತಿಷದಂತಹ ಶಾಸ್ತ್ರಗಳಲ್ಲೂ ಅಷ್ಟೆ; ಮೋಕ್ಷ ಅಥವಾ ಭಗವಂತನ ಸಾಕ್ಷಾತ್ಕಾರವೇ ನಮ್ಮ ಅಂತಿಮ ಗುರಿ ಎನ್ನುವುದಾಗಿ ಆಯಾ ಕ್ಷೇತ್ರಗಳ ಶ್ರೇಷ್ಠ ವ್ಯಕ್ತಿಗಳು ಸಾರುತ್ತಾರೆ. ನಮ್ಮ ದೇಶದಲ್ಲಿ ಎಲ್ಲ ಶಾಸ್ತ್ರಗಳೂ ಬೆಳವಣಿಗೆ ಹೊಂದುವ ಮೊದಲೇ ಬಹುಶಃ ಅಧ್ಯಾತ್ಮ ಜಗತ್ತಿಗೆ ನಮ್ಮ ಪ್ರಾಚೀನ ಋಷಿಗಳು ಕಾಲಿಟ್ಟಿರಬೇಕು; ಆಧ್ಯಾತ್ಮಿಕ ಅನುಭೂತಿಯಿಂದ ಅವರು ಕಂಡ ಸತ್ಯಗಳು ಇತರ ಎಲ್ಲ ಕ್ಷೇತ್ರಗಳನ್ನೂ ಪ್ರಭಾವಿಸಿದ್ದಿರಬೇಕು. ಆದ ಕಾರಣ ಎಲ್ಲ ಜ್ಞಾನಶಾಖೆಗಳು, ಕ್ಷೇತ್ರಗಳು ಅಂತಿಮವಾಗಿ ಬಂದು ತಲುಪುವ ನೆಲೆ ಆಧ್ಯಾತ್ಮಿಕವೆಂಬುದನ್ನು ಎಲ್ಲರೂ ಸ್ವೀಕರಿಸುವಂತಾಯಿತು.

ಆಧ್ಯಾತ್ಮಿಕ ಜಗತ್ತಿನಲ್ಲಿ ಅರಸುತ್ತ ಹೋಗುವ, ಅಗೋಚರ ಜಗತ್ತಿನಲ್ಲಿ ಸತ್ಯವನ್ನು ಅನ್ವೇಷಣೆ ಮಾಡುತ್ತ ಹೋಗುವ ಸಾಧಕನು ಎಂತಹ ಅನುಭವಗಳನ್ನು ಹೊಂದುತ್ತಾನೆ? ವೇದ, ಉಪನಿಷತ್ತುಗಳ ಉದ್ದಕ್ಕೂ ಅಂತಹ ಅನುಭವಗಳು ದಾಖಲಾಗಿವೆ. ಒಂದು ರೀತಿಯಲ್ಲಿ ಅವರ್ಣನೀಯ, ಮಾತಿಗೆ ನಿಲುಕದ್ದು ಹಾಗೂ ಈ ಜಗತ್ತಿನ ಎಲ್ಲ ಅನುಭವಗಳನ್ನೂ ಮೀರಿದ್ದು ಎಂದು ಈ ಅನುಭವಗಳ ಬಗ್ಗೆ ಅಲ್ಲಿ ಹೇಳಲಾಗಿದೆ; ಆದರೂ ಅಂಥ ಅನುಭವಗಳನ್ನು ಸೂಚಿಸುವ ಕೆಲವು ಚಿತ್ರಣ, ವರ್ಣನೆ, ವಿವರಣೆಗಳು ಅಲ್ಲಲ್ಲಿ ಕಂಡುಬರುತ್ತವೆ. ಅಂತಿಮವಾಗಿ ಇಂಥ ಅಲೌಕಿಕ ಅನುಭವಗಳನ್ನು ಪ್ರತಿಯೊಬ್ಬನೂ ತಾನಾಗಿಯೇ ಅನುಭವಿಸಬೇಕು; ಹಾಗೆ ಆದಲ್ಲದೆ ಬೇರೆ ಮಾರ್ಗವೇ ಇಲ್ಲ. ಆದರೆ ಅಂಥ ಅನುಭವವಾಗದೆ ಇರುವವನಿಗೆ ಅದರ ಒಂದು ಹೊಳಹನ್ನು ಮಾತ್ರ ವೇದ-ಉಪನಿಷತ್ತಿನ ಋಷಿಗಳು ಮಾತಿನ ಮೂಲಕ ಕಟ್ಟಿಕೊಡುತ್ತಾರೆ. ಅವುಗಳು ನೀಡುವ ಎಳೆಯನ್ನೇ ಹಿಡಿದುಕೊಂಡು ಹೋಗಬೇಕು, ಆಗ ಕೆಲವರಿಗೆ ಸತ್ಯದ ದರ್ಶನ ಆದರೂ ಅಗಬಹುದು ಎನ್ನುವ ಅಭಿಪ್ರಾಯ ಅಲ್ಲಿ ಕಂಡುಬರುತ್ತದೆ.

### ಭೌತಿಕ ಪ್ರಪಂಚದಾಚೆಗೆ

ಲೌಕಿಕ ಜಗತ್ತಿನಲ್ಲಿ ಕೆಲವು ಕ್ಷಣಗಳ ಕಾಲ ಮಾತ್ರ ಮಿಂಚಿ ಮಾಯವಾಗುವ ಅಂಥ ಅಸಾಧಾರಣ ಅನುಭವಗಳಿಗೆ ಮೂಲ ಆಧ್ಯಾತ್ಮಿಕ ಜಗತ್ತಿನಲ್ಲಿಯೇ ಇದೆ ಎನ್ನಲು ಆಧಾರವೇನು? ಈ ವಾದವನ್ನು ಒಪ್ಪಬಹುದೆ? ಒಪ್ಪಿದರೂ ನಂಬಬಹುದೆ? — ಈ ಪ್ರಶ್ನೆಗೆ ಉತ್ತರ ಕೊಡಬಲ್ಲವನು ಅಂಥ ಅನುಭವವನ್ನು ಹೊಂದಿದವನು ಮಾತ್ರ. ನಾವಿಲ್ಲಿ ಮಾಡಬಹುದಾದ ಸರಳವಾದ ಒಂದು ಪ್ರಯೋಗವೆಂದರೆ, ಇಂಥ ಲೌಕಿಕ ಜಗತ್ತಿನ ಅಸಾಮಾನ್ಯ, ಭವ್ಯ ಅನುಭವವನ್ನು ಆಧ್ಯಾತ್ಮಿಕ ಮಹಾಪುರುಷರ ಅಲೌಕಿಕ ಅನುಭವದೊಂದಿಗೆ ಹೋಲಿಸಿ ನೋಡುವುದು, ಅಷ್ಟೆ.

ಸೂರ್ಯೋದಯದ ವೇಳೆ ಇಡೀ ಜಗತ್ತೇ ಒಂದು ರಂಗಸ್ಥಳವಾಗುತ್ತದೆ. ಕತ್ತಲು ನಿಧಾನವಾಗಿ ಕಳೆದು, ಅರುಣೋದಯವಾಗಿ, ಸೂರ್ಯನ ಕಿರಣಗಳು ಹೊಂಬಣ್ಣ ತಾಳುತ್ತವೆ. ತಂಗಾಳಿ ಸುಳಿದಾಡುತ್ತ, ಇಡೀ ಜಗತ್ತಿಗೆ ಹೊಸ ಸಂದೇಶವನ್ನು ನೀಡುತ್ತದೆ. ಅದನ್ನು ಕಂಡ ಸಾಮಾನ್ಯ ಜನರು 'ನನ್ನಯ್ಯ ರಥವೇರಿ ಬರುವಾಗ । ನಾವೆದ್ದು ಕೈಯ ಮುಗಿದೇವು' ಎನ್ನುತ್ತಾರೆ. ಕವಿಗಳಾದರೆ, 'ಮೂಡಣ ರಂಗಸ್ಥಳದಲಿ ನೆತ್ತರು ಮಾಡುವನು, ಕುಣಿದಾಡುವನು' *(ಕುವೆಂಪು)*, ಅಥವಾ 'ಮೂಡಲ ಮನೆಯಾ ಮುತ್ತಿನ ನೀರಿನ ಎರಕವಾ ಹೊಯ್ದಾ । ನುಣ್ಣನ್ನೆರಕವಾ ಹೊಯ್ದಾ । ಬಾಗಿಲ ತೆರೆದೂ ಬೆಳಕೂ ಹರಿದೂ ಜಗವೆಲ್ಲಾ ತೊಯ್ದಾ । ಹೋಯ್ತೋ ಜಗವೆಲ್ಲಾ ತೊಯ್ದಾ ।' *(ಬೇಂದ್ರೆ)* ಎನ್ನುತ್ತಾರೆ. ಚಿತ್ರಕಲಾವಿದ ಅದೇ ಹೊಂಬಣ್ಣವನ್ನು ರಂಜಿಸಿ ಚಿತ್ರಿಸುತ್ತಾನೆ. ಸಂಗೀತಗಾರನಾದರೆ ಉದಯರಾಗವನ್ನು ಹಾಡಿ ಪ್ರಭಾತದ ಭಾವವನ್ನೂ ರಸಿಕನ ಮನೋರಂಗದಲ್ಲಿ ಮೂಡಿಸುತ್ತಾನೆ. ಇವೆಲ್ಲ ನೇರ ಅನುಭವದ ಮರುಸೃಷ್ಟಿ. ಆದರೆ ಇವೆಲ್ಲ ಅನುಭವಗಳು ಅಲೌಕಿಕ ಭಾವವನ್ನು ತಂದುಕೊಡುತ್ತದಲ್ಲ, ಅದಕ್ಕೆ ಮೂಲವಾದ, ನಿಜವಾದ ಅನುಭೂತಿ ಎಂಥದು? ಅದನ್ನು ಋಷಿಗಳ ವರ್ಣನೆಯಿಂದಲೇ ಕೇಳಬೇಕು:

**ನ ತತ್ರ ಸೂರ್ಯೋ ಭಾತಿ ನ ಚಂದ್ರತಾರಕಂ**
**ನೇಮಾ ವಿದ್ಯುತೋ ಭಾಂತಿ ಕುತೋಽಯಮಗ್ನಿಃ ।**
**ತಮೇವ ಭಾಂತಮನುಭಾತಿ ಸರ್ವಂ**
**ತಸ್ಯ ಭಾಸಾ ಸರ್ವಮಿದಂ ವಿಭಾತಿ ॥**

*(ಕಠ, ೨.೨.೧೫, ಮುಂಡಕ ೨.೨.೧೧)*

'ಅಲ್ಲಿ ಸೂರ್ಯನಾಗಲಿ, ಚಂದ್ರನಾಗಲಿ, ನಕ್ಷತ್ರಗಳಾಗಲಿ ಪ್ರಕಾಶಿಸುವುದಿಲ್ಲ. ಮಿಂಚುಗಳೂ ಅಲ್ಲಿ ಪ್ರಕಾಶಿಸುವುದಿಲ್ಲ. ಇನ್ನು ಅಗ್ನಿಯು ಪ್ರಕಾಶಿಸುವುದೆಲ್ಲಿ? ಪ್ರಕಾಶಿಸುತ್ತಿರುವ ಅವನನ್ನೇ ಅನುಸರಿಸಿ ಎಲ್ಲವೂ ಪ್ರಕಾಶಿಸುತ್ತಿರುವುವು. ಅವನ ಪ್ರಕಾಶದಿಂದಲೇ ಇದೆಲ್ಲವೂ ಪ್ರಕಾಶಿಸುತ್ತಿರುವುದು.'

ಸೂರ್ಯೋದಯ ನಿಸರ್ಗದ ಒಂದು ವಿಚಿತ್ರ. ಅಲ್ಲಿ ಸೌಂದರ್ಯವಿದೆ, ಆನಂದವಿದೆ. ಸೃಷ್ಟಿಯಲ್ಲಿ ಎಲ್ಲ ಶಕ್ತಿಗಳ ಮೂಲವಾದ ಬೆಳಕು, ಉಷ್ಣ ಹಾಗೂ ಜೀವಚೈತನ್ಯಗಳ ಸಂಗಮವಾಗುತ್ತಿದೆ. ಆದರೆ ಈ ಎಲ್ಲ ಶಕ್ತಿ, ಸತ್ವಗಳ ಅಭಿವ್ಯಕ್ತಿ ಉಂಟಾಗುವುದು ಈ ಪ್ರಪಂಚದ ಪರಿಮಿತಿಯಲ್ಲಿ ; ಜಡ-ಚೈತನ್ಯಗಳ ಒಡನಾಟದಲ್ಲಿ. ಹತ್ತು ಹಲವು ಕ್ರಿಯೆಗಳ ಚಲನಶೀಲ ಪ್ರಪಂಚವು ತನ್ನದೇ ಆದ ಚಟುವಟಿಕೆಗಳಿಂದ ಮೈಮರೆಯುತ್ತದೆ — ಅದರ ನಡುವೆ ಮಾನವನ ಮನಸ್ಸು ಕೆಲವು ಕ್ಷಣ ಅಪರಿಮಿತ ಅರಿವು-ಆನಂದಗಳ ಕ್ಷಣಗಳಲ್ಲಿ ಆರ್ದ್ರವಾಗುವುದು. ಕಾಲ-ದೇಶಗಳಿಗೆ ಸೀಮಿತವಾದ ಈ ವಿಶಿಷ್ಟ ಕ್ಷಣಗಳು ಎಲ್ಲಿಂದ ಬಂದವು? ಮತ್ತೆಲ್ಲಿ ಮರೆಯಾದವು? ಕೆಲವೇ ಕ್ಷಣವಾದರೂ, ಆ ಕ್ಷಣಿಕ ಆನಂದದ ಮಿಂಚು ಅನಂತದತ್ತ ಇಣುಕುನೋಟ ಬೀರಿ ಮರೆಯಾಗುವುವು. ಆ ತಲ್ಲೀನತೆಯ, ಭಾವಘನರೂಪದ ಸುಖದ

ಮಡುವಿನಲ್ಲಿ ಮಿಂದೆದ್ದ ಜೀವವು ಮತ್ತೆ ಅದೇ ಅನುಭವಕ್ಕಾಗಿ ಹಾತೊರೆಯುವುದು, ಮತ್ತೆ ಅಂತಹ ಕ್ಷಣದ ಅನ್ವೇಷಣೆ ತೀವ್ರವಾಗುವುದು. ಆದರೆ, ಅಯ್ಯೋ — ಅದೆಲ್ಲಿ ಮತ್ತೆ ದೊರೆಯುವುದು? ಹಪಹಪಿಸುವ ಅಂತರಂಗದ ತುಡಿತದಿಂದ ಜೀವವು ಮತ್ತೆ ಮತ್ತೆ ಅರಸುತ್ತ ತೊಳಲಾಡುವುದು.

### ಮಾತಿನ ಮಿತಿ

ಇಂತಹ ಕಾತರತೆ ಎಲ್ಲ ಸೂಕ್ಷ್ಮ ಮನಸ್ಸಿನ ವ್ಯಕ್ತಿಗಳಿಗೆ ಬಂದೇ ಬರುತ್ತದೆ. ಸಂವೇದನಶೀಲ ಹೃದಯ ಅದಕ್ಕಾಗಿ ಎಷ್ಟು ಕಾಲ ಬೇಕಾದರೂ ಕಾಯುವುದು. ಆದರೆ ಅಂತಹ ದಿವ್ಯಕ್ಷಣದ ಮೂಲವಾದರೂ ಎಲ್ಲಿ? ಇದನ್ನು ಅರಿತವನು, ಅರಿಯುವವನು ಸಾಮಾನ್ಯ ವ್ಯಕ್ತಿಯಲ್ಲ, ಋಷಿ. ವ್ಯಕ್ತ ಪ್ರಪಂಚದಾಚೆಗಿನ ಸತ್ಯವನ್ನು ಅರಿಯಲು ತನ್ನೆಲ್ಲವನ್ನೂ ತ್ಯಜಿಸಿದ ಧೀರ, ವಿರಕ್ತ ಹಾಗೂ ತಪಸ್ವಿ ಅವನು. ಚಳಿ, ಮಳೆಯೆನ್ನದೆ, ಹಗಲು, ರಾತ್ರಿಯೆನ್ನದೆ ಅಂತಹ ಸತ್ಯದ ಶೋಧಕ್ಕಾಗಿ ಪ್ರಾಣವನ್ನರ್ಪಿಸಬಲ್ಲ ಅವನಿಗೆ ಯಾವುದೋ ಒಂದು ದಿನ ಸತ್ಯ ಗೋಚರವಾಗುತ್ತದೆ. ಅದು ಅವನ ಹೃದಯದ ಅರಕೆಯನ್ನೆಲ್ಲ ತಣಿಸುತ್ತದೆ; ಆ ದರ್ಶನದ ಆನಂದ ಅವನ ಎಲ್ಲ ಕಷ್ಟ, ಸಂಕಟಗಳನ್ನು ದೂರಮಾಡುತ್ತದೆ. ಅಂತಹ ಧನ್ಯಭಾವದಲ್ಲಿ ಮಿಂದೆದ್ದ ಅವನು, ತಾನು ಕಂಡ ಸತ್ಯವನ್ನು ಇತರರಿಗೂ ತಿಳಿಸುವ ಭರದಲ್ಲಿ ಒಂದು ಸತ್ಯವನ್ನು ಮರೆತ — ಅಯ್ಯೋ, ಈ ಅನುಭವ ಲೋಕವನ್ನು ಮೀರಿದ್ದು, ಇಂದ್ರಿಯ-ಮನಸ್ಸು-ಬುದ್ಧಿಗಳನ್ನು ಮೀರಿದ್ದು, ಇಡೀ ಮನುಷ್ಯನ ಗ್ರಹಿಕೆಯ ಸಾಮರ್ಥ್ಯವನ್ನೇ ಮೀರಿದ್ದು! ಅದನ್ನು ಭಾಷೆಯಲ್ಲಿ ಹಿಡಿದಿಡುವುದಾದರೂ ಹೇಗೆ?

ಆದರೂ ತನ್ನ ಯತ್ನ ಬಿಡಲಿಲ್ಲ ಉಪನಿಷತ್ಕಾಲದ ಋಷಿ. ತನ್ನ ಅನುಭೂತಿಯ ವಿವರಣೆಗೆ ಕಾವ್ಯದ ಭಾಷೆಯನ್ನು ಬಳಸಿದ. ದಿವ್ಯಾನುಭವದ ನಿಗೂಢ ಸತ್ಯವು ತನ್ನ ಎಲ್ಲ ಅಗಾಧತೆ, ಭವ್ಯತೆ ಹಾಗೂ ಸೌಂದರ್ಯಗಳನ್ನು ಹೊತ್ತುಕೊಂಡು ಋಷಿವಾಕ್ಯವಾಗಿ ಮೈವೆತ್ತು ನಿಂತಿತು: ''ನ ತತ್ರ ಸೂರ್ಯೋ ಭಾತಿ...''

ಈ ಮಂತ್ರದ ಅರ್ಥ ಎಷ್ಟು ಎತ್ತರಕ್ಕೆ ನಮ್ಮನ್ನು ಕರೆದೊಯ್ಯುತ್ತದೆ! ಮೊದಲ ಸಾಲು ಲೌಕಿಕ ಜಗತ್ತಿನ ಅನಭವವನ್ನು ನಿರಾಕರಿಸುತ್ತದೆ. ಅಲ್ಲಿ ಸೂರ್ಯ, ಚಂದ್ರ, ತಾರೆಗಳಿಲ್ಲ ಎಂದ ಮಾತ್ರಕ್ಕೆ ಬರೀ ಕತ್ತಲು ಎಂದರ್ಥವಲ್ಲ; ಈ ಸೃಷ್ಟಿಯ ಬೆಳಕಿನ ಮೂಲಗಳಾವವೂ ಅಲ್ಲಿಲ್ಲ — ಏಕೆಂದರೆ ಇವೆಲ್ಲ ಸ್ವತಂತ್ರ ಬೆಳಕುಗಳಲ್ಲ, ಎಲ್ಲವೂ 'ಅನುಭಾತಿ' ಅಂದರೆ ಬೇರೆ ಬೆಳಕನ್ನೇ ಬೆಳಗುತ್ತವೆ. ಅಲ್ಲಿ - ಅಂದರೆ ಈ ಪ್ರಪಂಚವನ್ನು ಮೀರಿದ, ಆಧ್ಯಾತ್ಮಿಕ ಜಗತ್ತಿನಲ್ಲಿ, ಅಥವಾ ಪರಬ್ರಹ್ಮವಸ್ತುವಿನ ಆ ಸ್ತರದಲ್ಲಿ ಎಲ್ಲವಕ್ಕೂ ಮೂಲವಾದ ಅಖಂಡ ಬೆಳಕಿದೆ. ಅದು ಎಲ್ಲ ಬೆಳಕಿನ, ಚೈತನ್ಯದ, ಎಲ್ಲ ಶಕ್ತಿಗಳ ಮೂಲ. ಅದರಿಂದಲೇ ಎಲ್ಲವೂ ಬೆಳಗುತ್ತವೆ, ಬದುಕುತ್ತವೆ. ಕಾವ್ಯಮಯವಾದ ಈ ಮಂತ್ರದಲ್ಲಿ ವರ್ಣನೆಯ ಸೌಂದರ್ಯಕ್ಕಿಂತ ಹೆಚ್ಚಾಗಿ, ಸತ್ಯದ ಅಸದೃಶ ಚಿತ್ರಣವಿದೆ. ಭಾವಿಸುವ, ಊಹಿಸುವ ಸಾಮಾನ್ಯ ಮಾನವ ಮನಸ್ಸು ಕೂಡ ಒಂದುಕ್ಷಣ ನಿಂತು, ತಲ್ಲೀನತೆಯಿಂದ ಇದನ್ನು ಕುರಿತು ಆಲೋಚಿಸಿ ಮೈಮರೆಯಬೇಕು. ಕ್ಷಣಿಕವಾಗಿಯಾದರೂ ಭವ್ಯತೆಯ ಅನುಭವವನ್ನು ಪಡೆದ ಸೂಕ್ಷ್ಮ ಮನಸ್ಸು ಇಂತಹ ಋಷಿವಾಕ್ಯದಿಂದ ಸ್ಫೂರ್ತಿ ಪಡೆದು, ಅದು ಕಟ್ಟಿಕೊಡುವ ಅನುಭೂತಿಯ ಬೆನ್ನು ಹತ್ತಿ ಸಾಗಬೇಕು. ಇದು ಪ್ರಜ್ಞೆಯ ಸೂಕ್ಷ್ಮ ಆರೋಹಣ, ವ್ಯಕ್ತಿತ್ವದ ಆಂತರಂಗಿಕ ವಿಕಾಸ. ಬುದ್ಧಿ-ಹೃದಯಗಳೆರಡೂ ಸಮರಸದಲ್ಲಿ ನಿಂತು ಹಾಡುವ ರಾಗ-ತಾನ-ಪಲ್ಲವಿ.

### ಸತ್ಯವನ್ನು ಅರಸಿದವರ ಹಾದಿ

ಮತ್ತೆ ಜೀವನಕ್ಕೆ ಮರಳುವ, ಮಣ್ಣಿನ ಬದುಕನ್ನು ಬದುಕುವ ಮಾತುಗಳನ್ನು ನಾವು ಬಹಳಷ್ಟು ಕೇಳುತ್ತೇವೆ. ಇದನ್ನು ಒಂದರ್ಥದಲ್ಲಿ ಮೌಲ್ಯ, ಆದರ್ಶ ಎಂದು ಭಾವಿಸುವರಿದ್ದಾರೆ. ಪ್ರಪಂಚಕ್ಕೆ, ಬದುಕಿಗೆ ಅಂಟಿಕೊಂಡಿರಬೇಕು ಎಂಬರ್ಥದಲ್ಲಿ ಈ ವಿಚಾರಕ್ಕೆ ಬೆಲೆಯಿದೆ. ಆದರೆ ಅತೀತದತ್ತ ಇಣುಕಿ ನೋಡುವ, ಲೌಕಿಕ-ಭೌತಿಕ ಪ್ರಪಂಚದಾಚೆಗೆ ಇರುವ ಅತೀತವನ್ನು ಅರಸುವ ದೃಷ್ಟಿ ಇಂದು ನಿನ್ನೆಯದಲ್ಲ. ಮಾನವನ ಮನಸ್ಸು ಅದೆಷ್ಟು ಪ್ರಾಚೀನ ಕಾಲದಲ್ಲೇ ಈ ರೀತಿ ಉದಾತ್ತವಾಗಿ, ವಿಶಾಲವಾಗಿ ಹಾಗೂ ಎಲ್ಲ ಮಿತಿಗಳಾಚೆ ದಾಟಿ ಹೋಗುವ ರೀತಿಯಲ್ಲಿ ಚಿಂತಿಸಿತಲ್ಲ ಎಂಬುದು ಆಶ್ಚರ್ಯಕರವಾದ ಸಂಗತಿ. ತನ್ನನ್ನು ಕಾಡಿದ, ಸತ್ಯವನ್ನು ಕುರಿತ ಹಾಗೂ ಜೀವನವನ್ನು ಕುರಿತ ಮೂಲಭೂತ ಪ್ರಶ್ನೆಗಳಿಗೆ ಮಾನವನು ಉತ್ತರವನ್ನು ಹುಡುಕಲು ಯತ್ನಿಸಿದರೆ ಅದು ತಪ್ಪಾಗುವುದೆ? ಎಲ್ಲವನ್ನೂ ಬಿಟ್ಟು ಸತ್ಯವನ್ನು ಅರಸಲು ತನ್ನ ಬದುಕನ್ನು ಸಮರ್ಪಿಸಿದವನನ್ನು ಸಿನಿಕನೆಂದೋ, ಹೇಡಿಯೆಂದೋ ಕರೆಯುವುದಲ್ಲ — ಅವನನ್ನು ನಿಜವಾದ ಧೀರನೆನ್ನಬೇಕು, ನಿಜವಾದ ತ್ಯಾಗಿಯೆನ್ನಬೇಕು. ಅದು ಎಲ್ಲರ, ಜನ ಸಾಮಾನ್ಯರ ಹಾದಿಯಲ್ಲ — ಅವನದು ಎಲ್ಲವನ್ನೂ ದಾಟಿ ಹೋದವನ ಹಾದಿ. ಆದರೆ ಅದು ಸತ್ಯದ ಹಾದಿ, ಬೆಳಕಿನ ಹಾದಿ.

ಮಾನವನು ಪ್ರಪಂಚದಲ್ಲಿ ಬದುಕಿರುವ ಅಲ್ಪ ಸಮಯದಲ್ಲಿ ಅದೆಷ್ಟು ಅನುಭವಗಳ ಮೂಲಕ ಹಾದುಹೋಗುತ್ತಾನೆ! ತನ್ನ ಜೀವಿತದ ಕೊನೆಯ ಗಳಿಗೆಯಲ್ಲಿ ನಿಂತು ಸಿಂಹಾವಲೋಕನ

**ಮೇ ತಿಂಗಳ ಕಾರ್ಯಕ್ರಮಗಳು**

| | | |
|---|---|---|
| ೭ | ಶುಕ್ರವಾರ | ಏಕಾದಶಿ |
| ೧೪ | ಶುಕ್ರವಾರ | ಬಸವ ಜಯಂತಿ |
| ೧೭ | ಸೋಮವಾರ | ಶಂಕರ ಜಯಂತಿ |
| ೨೨ | ಶನಿವಾರ | ಏಕಾದಶಿ |
| ೨೬ | ಬುಧವಾರ | ಬುದ್ಧ ಪೂರ್ಣಿಮೆ |